# ಲಾರ್ವೆನ್ ಪಬ್ಲಿಕ್ ಶಾಲೆ

**ಆನೇಕಲ್ ರಸ್ತೆ ಚಂದಾಪುರ**

**ಸಂಕಲನಾತ್ಮಕ ಮೌಲ್ಯಮಾಪನ- ಮಾರ್ಚ್ ೨೦೨೦**

**ವಿಷಯ :ಕನ್ನಡ (ದ್ವಿತೀಯ ಭಾಷೆ )**

**ತರಗತಿ: 7ನೇ ತರಗತಿ**

**ಸಮಯ: 3ಗಂ. 15ನಿ.** **ಅಂಕಗಳು:80**

'ಎ' ವಿಭಾಗ

**1)ಕೊಟ್ಟಿರುವ ಪ್ರಬಂಧಗಳಲಿ ಒಂದು ಪ್ರಬಂಧವನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ.** **– 5**

1)ಬಾಲ ಕಾರ್ಮಿಕ ಪದ್ಧತಿ

2)ಸ್ವಚ್ಛ ಭಾರತ ಅಭಿಯಾನ

3)ರಾಷ್ಟ್ರೀಯ ಭಾವೈಕ್ಯತೆ

**2)ನಿಮ್ಮ ಗ್ರಾಮದಲ್ಲಿ ಮಕ್ಕಳಿಗಾಗಿ ಒಂದು ಉದ್ಯಾನವನ ಸ್ಥಾಪಿಸ ಬೇಕೆಂದು ಕೋರಿಕೊಳ್ಳುತ್ತ ಗ್ರಾಮ ಪಂಚಾಯಿತಿಯ ಅಧ್ಯಕ್ಷರಿಗೊಂದು ಪತ್ರ ಬರೆಯಿರಿ.** **–5**

**ಅಥವಾ**

**ನೀವು ನಿಮ್ಮ ವಾರ್ಷಿಕ ಪರೀಕ್ಷೆಗೆ ಹೇಗೆ ಸಿದ್ಧರಾಗಿದ್ದೀರಿ ಎಂಬುದನ್ನು ತಿಳುಸುತ್ತ ನಿಮ್ಮ ತಾಯಿಯವರಿಗೆ ಒಂದು ಪತ್ರ ಬರೆಯಿರಿ.**

**3)ಕೆಳಗಿನ ಗದ್ಯ ಭಾಗವನ್ನು ಓದಿಕೊಂಡು ನಂತರ ಕೇಳಲಾದ ಪ್ರಶ್ನೆಗಳಿಗೆ ಉತ್ತರಿಸಿ.**

**ತಲಕಾಡಿನ ವೈಭವ**

ತಲಕಾಡಿನ ಇತಿಹಾಸದಲ್ಲಿಗಂಗರ ಇತಿಹಾಸ ಜೈನ ಧರ್ಮದ ವಿವರಣೆ ಇದೆ. ಕನ್ನಡ ಸಾಹಿತ್ಯದ ಕಥನವಿದೆ. ಹೊಯ್ಸಳ ವಾಸ್ತುಶಿಲ್ಪದ ವಿವರಣೆ ಇದೆ. ಎಲ್ಲಕ್ಕೂ ಮಿಗಿಲಾಗಿ ಕನ್ನಡವೇಧರ್ಮ,ಕನ್ನಡವೇ ಬಾಳಿನ ಪರಿಪೂರ್ಣತೆಯೆಂದು ಬಗೆದು ಅದಕ್ಕಾಗಿ ಹೋರಾಡಿ ಮಡಿದ ವೀರರ ಉಜ್ವಲ ಚರಿತ್ರೆ ಇದೆ. ಗಂಗರ ರಾಜ್ಯ ಗಂಗವಾಡಿ ಎಂದು ಹೆಸರಾಗಿದೆ.ಅವರ ಮೊದಲ ರಾಜಧಾನಿ ಕೋಲಾರ.ಸುಮಾರುಕ್ರಿ. ಶ. 500 ರ ಹೊತ್ತಿಗೆ ಕೋಲಾರದಿಂದ ಹರಿವರ್ಮ ರಾಜಧಾನಿಯನ್ನು ತಲಕಾಡಿಗೆ ತಂದನು.ಅಲ್ಲಿಂದ ಮುಂದಕ್ಕೆ ಐದು ಶತಮಾನಗಳವರೆಗೆ ಅಂದರೆ ಹತ್ತನೆಯ ಶತಮಾನದವರೆಗೂ ಗಂಗರು ಆಳ್ವಿಕೆ ನಡೆಸಿದರು.

ಮಾರಸಿಂಹ, ರಾಚಮಲ್ಲ, ರಕ್ಕಸ ಗಂಗರ ತಲಕಾಡು ಪುಣ್ಯಭೂಮಿ. ಅವರೊಂದಿಗೆ ಕೊನೆಯವರೆಗೂ ಒಂದು ಹಿರಿಯ ಜೀವ ಇದ್ದಿತು.ಅವನ ಹೆಸರು ಚಾವುಂಡರಾಯ, ಆತ ಮಂತ್ರಿ.ಅವನನ್ನು ಜನ ಹೆಸರು ಹಿಡಿದು ಕರೆಯುತ್ತಿರಲಿಲ್ಲ. 'ರಾಯ', 'ಅಣ್ಣ', ಎಂದು ಸಂಬೋಧಿಸುತ್ತಿದ್ದರು. ಅವನಿಗೆ ಕನ್ನಡದ ಏಳ್ಗೆಯ ಹಂಬಲವೇ ಹಂಬಲ. ಸ್ವತ: ಕವಿ. 'ಚಾವುಂಡರಾಯ ಪುರಾಣ' ಎಂಬ ಹೆಸರಿನ ಅರವತ್ತ ಮೂರು ಪುಣ್ಯ ಪುರುಷರ ಚರಿತ್ರೆ, ಅವನು ಕನ್ನಡಕ್ಕೆ ಕೊಟ್ಟ ಕಾಣಿಕೆ.

ಹತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಮುದವೊಳಲಿನಿಂದ ತಂದೆ ತಾಯಿಯರಿಗೆ ಹೇಳದೆ ಬಳೆಮಾರುವ ಉದ್ಯಮವನ್ನು ಕೃಷ್ಣಾ ತೀರದ ಮಳಲಿನಲ್ಲಿ ಮುಚ್ಚಿಟ್ಟು ತಲಕಾಡಿಗೆ ರನ್ನ ಓಡಿ ಬಂದನು. ಏನು ನಂಬಿ ಬಂದ ತಲಕಾಡಿನ ಮಣ್ಣನ್ನು! ಇಲ್ಲಿರಾಯನಿದ್ದಾನೆ, ಅತ್ತಿಮಬ್ಬೆ ಇದ್ದಾಳೆ, ಅಜಿತಸೇನ ಗುರುಗಳ ಶಿಷ್ಯರಿದ್ದಾರೆಂದು. ಮುಂದೆ ರನ್ನ ಮಹಾ ಕವಿಯಾದ.

ಮುಂದೆ ಅನೇಕ ರಾಜ ಮನೆತನಗಳು ಆಳಿಹೋದವು, ಕಲೆ, ವಾಸ್ತುಶಿಲ್ಪಕ್ಕೆ ತಮ್ಮದೆ ಆದ ಕೊಡುಗೆಗಳನ್ನು ನೀಡಿವೆ.ತಲಕಾದು ಪ್ರಕೃತಿ ಸೌಂದರ್ಯದಿಂದ ಕೂಡಿರುವುದರ ಜೊತೆಗೆ ರಾಜಮನೆತನಗಳ ವೈಭವಗಳನ್ನೂ ದೇವಾಲಯಗಳ ಸೌಂದರ್ಯವನ್ನೂ ಹೋದಿರುವುದು ವಿಷೇಶ.

**ಪ್ರಶ್ನೆಗಳು**

**5*2=10**

1) ತಲಕಾಡಿನ ಇತಿಹಾಸದಲ್ಲಿ ಏನೇನು ಇದೆ?

2) ಗಂಗರ ಮೊದಲ ರಾಜಧಾನಿ ಯಾವುದು?ತಲಕಾಡನ್ನು ಗಂಗರ ರಾಜಧಾನಿಯನ್ನಾಗಿ ಮಾಡಿದವರು ಯಾರು? ಯಾವಾಗ?

3) ಚಾವುಂಡರಾಯ ಯಾರು? ಅವನನ್ನು ಜನ ಏನೆಂದು ಕರೆಯುತ್ತಿದ್ದರು?

4) ಮುದುವೊಳಲಿನಿಂದ ತಲಕಾಡಿಗೆ ಓಡಿ ಬಂದವರು ಯಾರು? ಅವರ ಉದ್ಯಮ ಯಾವುದಾಗಿತ್ತು?

5) ತಲಕಾಡಿನ ವಿಷೇಶತೆ ಏನು?

**4) ಈ ಪದಗಳಿಗೆ ಅರ್ಥ ಬರೆಯಿರಿ.** **3*1=3**

1)ತರು 2)ಮಂದಿ 3)ಅನ್ನದಾತ

**5)ಈ ಪದಗಳಿಗೆ ವಿರುದ್ಧ ಪದ ಬರೆಯಿರಿ.** **3*1=3**

1)ಸ್ವಾರ್ಥ 2)ಅಜ್ಞಾನಿ 3)ಹೊಗಳು

**6)ಈ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.** **3*1=3**

1)ಸೊಗಸು 2)ಪಾರಾಗು 3)ಮುಕ್ತಿ

**7)ಈ ಪದಗಳನ್ನು ಬಿಡಿಸಿ ಬರೆಯಿರಿ.** **3*1=3**

1)ಕಾಣೆಯಾಗು 2)ಬಯಲಾಟ 3)ಬೇಸರವಾಯಿತು

**8)ಕೆಳಗಿನ ಪದಗಳಿಗೆ ಗ್ರಾಂಥಿಕ ರೂಪ ಬರೆಯಿರಿ.** **3*1=3**

1)ಬಾಳ 2)ಬಂದ್ಯೆತೆ 3)ಕೇಳಸ್ತ್ಯೆತಿ

**9)ಈ ವಾಕ್ಯಗಳಲ್ಲಿರುವ ಪದಗಳನ್ನ ಅರ್ಥ ಪೂರ್ಣವಾಗಿ ಜೋಡಿಸಿ ಬರೆಯಿರಿ.** **3*1=3**

1)ಕೂಗಿ ಅಂತ ನಾನಿಲ್ಲಿದ್ದೇನೆ ಹೇಳುತ್ತಿದೆಯಲ್ಲಾ ಕತ್ತೆ.

2)ಮಂದಿ ನಾಲ್ಕೈದು ಮನೆಗೆ ನಸಿರುದ್ದೀನನ ಕಳ್ಳರು ನುಗ್ಗಿದರು.

3)ತೀರಾಕತ್ತೆ ನಸಿರುದ್ದೀನನ ಬರಬರುತ್ತಾ ಸೋಮಾರಿಯಾಗ ತೊಡಗಿತು.

## 'ಬಿ' ವಿಭಾಗ

**10)ಈಕವಿಯಪರಿಚಯ ಬರೆಯಿರಿ.** **2*3=6**

1)ದ. ರಾ. ಬೇಂದ್ರೆ **ಅಥವಾ** 2)ಚಂದ್ರಶೇಖರ ಕಂಬಾರ

**11) ಈ ಪದ್ಯವನ್ನು ಪೂರ್ಣಗೊಳಿಸಿ** **3*1=3**

**ಸಿಂಧು,------------------**

**-----------------**ನನ್ನ ತಾಯಿ **(4 ಸಾಲುಗಳು)**

**ಅಥವಾ**

**ಮೇಲೆ ಬಾನಿನಲ್ಲಿ------------------**

**------------------**ಟಾಟಾಅಂದಿತು **(4 ಸಾಲುಗಳು)**

12)ಈ ಮಾತನ್ನು ಯಾರು ಯಾರಿಗೆ ಹೇಳಿದರು. 4*2=8

1)"ಬೇಕಿದ್ದರೆ ನಿನ್ನ ಪಾಲಿನ ಹಣ್ಣು ಹಾಲು ಕೊಡು."

2)"ಜಾತ್ರೆಯಲ್ಲೇಕೆ ಇಷ್ಟೊಂದು ಅಂಗಡಿಗಳಿವೆ?"

3)"ಈಗವರು ತಮ್ಮ ಮಗನ ಅಂತಿಮ ವಿದಾಯಕ್ಕೆ ಹೋಗಿದ್ದಾರೆ."

4)"ಗೋಬಿ ಮಂಚೂರಿ ಎಂದರೆ ನಿಮಗೆ ಬಲು ಪ್ರೀತಿ ಅಲ್ಲವೇ."

13) ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. 10*1=10

1) ಶಾಸನಗಳು ಏನನ್ನು ಸಾರುತ್ತವೆ?

2) ಬೇಡನ ಹೆಂಡತಿ ಹಂದಿಯಾಗಿ ಹುಟ್ಟಿದ್ದು ಏಕೆ?

3) ಪಿಸು ಮಾತಿನ ಗುಂಬಸ್ ಎಲ್ಲಿದೆ?

4) ಅನ್ನದಾತನ ಗೆಳೆಯರು ಯಾರು?

5) ವಿಶ್ವದಲ್ಲಿ ಅತ್ಯುತ್ತಮವಾದ ವಸ್ತು ಯಾವುದು?

6) ಶ್ರಾವಣದ ಮಳೆಯನ್ನು ಬೇಂದ್ರೆಯವರು ಯಾರ ಕುಣಿತಕ್ಕೆ ಹೋಲಿಸಿದ್ದಾರೆ?

7) ನಾವು ಯಾರಿಗಾಗಿ ನೆಲ ಜಲಗಳನ್ನು ರಕ್ಷಿಸಬೇಕು?

8) ಕೊಳದಲ್ಲಿನ ಆಮೆಗೆ ಯಾವ ಆಸೆ ಮೂಡಿತು?

9) ಹೂಕೋಸು ಯಾವ ರೋಗಗಳನ್ನು ದೂರ ಮಾಡುತ್ತದೆ?

10) ನಮ್ಮೊಳಗಿನ ಹರನನ್ನು ಯಾರು ತೋರುತ್ತಾರೆ?

14)ಈ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ. 3*5=15

1)ಬೇಡನು ಹುಡುಗನನ್ನು ಯಾವ ರೀತಿ ಉಪಚರಿಸಿದನು?

2)ಗೋಲ ಗುಂಬಸ್‌ನ ವಿಶೇಷತೆಗಳೇನು?

3)ರೈತನನ್ನು ಯೋಗಿ ತ್ಯಾಗಿ ಎಂದು ಏಕೆ ಕರೆಯುತ್ತಾರೆ?

4)ಕಳ್ಳರು ನಸಿರುದ್ದೀನನ ಮನೆಗೆ ನುಗ್ಗಿದ ಪ್ರಸಂಗವನ್ನು ವಿವರಿಸಿ.

5)ಬೇಂದ್ರೆಯವರು ಶ್ರಾವಣ ಎಲ್ಲೆಲ್ಲಿಗೆ ಬಂತು ಎಂದು ಹೇಳಿದ್ದಾರೆ?

**ಶುಭವಾಗಲಿ**